## 4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 3354/2017 **ಚಾ.ಸಾ.-** 1 ಅ.ಸಾ.- 1

**ಪ್ರ.ವ.ಬೊ.** ದಿಃ 06.11.2019

ಸಾಕ್ಷಿದಾರನ ಹೆಸರು : ಕೆ.ಬಾಬು

ತಂದೆಯ ಹೆಸರು : ಗೊರವಯ್ಯ

ವಯಸ್ಸು : 39 ವರ್ಷ

ಕೆಲಸ : ಸೋಫಾ ಬೆಡ್ಡಿಂಗ್ ಕೆಲಸ

ವಾಸ : ಗಂಗನಹಳ್ಳಿ, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ಆರೋಪಿ ಗೊತ್ತು, ಬೆಂಗಳೂರಿನ ಗಂಗಾನಗರದಲ್ಲಿ 4ನೇ ಮುಖ್ಯರಸ್ತೆಯಲ್ಲಿ ಕಾಳಿಕಾಂಬ ಜುವೆಲ್ಲರಿ ವರ್ಕ್ಸ್‌ನ್ನು ಆರೋಪಿ ಸುಮಾರು ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, ಅವರು ಗ್ರಾಹಕರಿಂದ ಚಿನ್ನವನ್ನು ಪಡೆದುಕೊಂಡು ಅವರಿಗೆ ಒಡವೆಗಳನ್ನು ಮಾಡಿಸಿಕೊಟ್ಟು ಹಣ ಪಡೆಯುತ್ತಿದ್ದು, ಈ ವ್ಯವಹಾರದಲ್ಲಿ ಎಲ್ಲರ ಪರಿಚಯ ಆಗಿತ್ತು. ನನಗೂ ಅದೇ ರೀತಿ ಆರೋಪಿಯ ಪರಿಚಯ ಆಗಿತ್ತು. ಮೊದಲು ಆರೋಪಿ ವಿಶ್ವಾಸ ಗಳಿಸಿ ಜನರಿಂದ ವ್ಯವಹಾರ ಮಾಡುತ್ತಿದ್ದ. ದಿಃ 01.10.2015 ರಂದು ನಾನು ಆರೋಪಿಗೆ ನನ್ನ ಹೆಂಡತಿಗೆ ಸಂಬಂಧಿಸಿದ ಹಳೆಯ 30 ಗ್ರಾಂ ಬಂಗಾದ ಚಿನ್ನದ ನೆಕ್ಲೆಸನ್ನು ನೀಡಿ ಅದರ ಜೊತೆ 5 ಗ್ರಾಂ ಸೇರಿಸಿ ಲಾಂಗ್ ಚೈನು ಮಾಡಿಕೊಡಲು ಕೊಟ್ಟಿದ್ದೆ. ಆ ಸಮಯದಲ್ಲಿ ಆರೋಪಿ ರೂ.20,000/ ಮುಂಗಡ ಕೇಳಿದ್ದು, ನಾನು ರೂ.13,000/- plus ರೂ.1,000/- ಮುಂಗಡವಾಗಿ ಕೊಟ್ಟಿದ್ದು ಅದಕ್ಕೆ ಆರೋಪಿ ರಶೀದಿಯನ್ನು ಕೊಟ್ಟಿದ್ದರು. 10 ದಿನಗಳಲ್ಲಿ ಮಾಡಿಕೊಡುವುದಾಗಿ ಹೇಳಿದ್ದು, 10 ದಿನಗಳ ನಂತರ ಹೋಗಿ ಕೇಳಿದಾಗ ನಾನು ಮಾಡಲಿಲ್ಲ, ಬೇರೆಯವರಿಗೆ ಕೊಟ್ಟು ಮಾಡಿಸಿದ್ದೇನೆ ಎಂದು ತಿಳಿಸಿದರು. ಎರಡು ವಾರಗಳ ನಂತರ ನೋಡಿದಾಗ ಅವರ ಅಂಗಡಿಯ ಜಾಗದಲ್ಲಿ ಬೇರೆಯವರು ಅಂಗಡಿ ಹಾಕಿದ್ದರು. ಹಾಗೂ ಆರೋಪಿಯ ಮೊಬೈಲ್‌ಗೆ ಕರೆ ಮಾಡಿದಾಗ ಅದು switch off ಆಗಿತ್ತು. ನನ್ನ ಹಾಗೆ

ಚಾ.ಸಾ.2 ರಿಂದ 6, ಇನ್ನೂ ಹಲವಾರು ಜನರಿಗೆ ಆರೋಪಿ ನಂಬಿಸಿ ಮೋಸ ಮಾಡಿರುತ್ತಾನೆ. ಈ ವಿಚಾರವಾಗಿ ನಾವು ಜಂಟಿಯಾಗಿ ದೂರು ನೀಡಿದ್ದೇವೆ. ದೂರನ್ನು ನಿ.ಪಿ.1 (8 ಪುಟಗಳು) ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಬಳಿ ಆರೋಪಿ ವ್ಯವಹಾರ ಜರುಗಿಸಿದಾಗ ನನ್ನ ಬಳಿ ಹಣ ಹಾಗೂ ಒಡವೆ ಪಡೆದು ಕೊಟ್ಟ ರಶೀದಿಯ ಜೆರಾಕ್ಸ್ ಪ್ರತಿಯನ್ನು ತನಿಖೆ ಕಾಲದಲ್ಲಿ ಕೊಟ್ಟಿದ್ದು, ಅದರ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.2 ಮತ್ತು ತನಿಖೆ ಕಾಲದಲ್ಲಿ ಕೊಟ್ಟ ಪ್ರತಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ವಿವರವಾದ ಹೇಳಿಕೆ ನೀಡಿದ್ದೇನೆ. ಆರೋಪಿ ನನಗೆ ಹಾಗೂ ಇತರರಿಗೆ ಒಡವೆ ಹಾಗೂ ಹಣ ಕೊಡದೇ ನಂಬಿಸಿ ಮೋಸ ಮಾಡಿದ್ದಾನೆ. ಈ ದಿನ ಆರೋಪಿ ಗೈರು ಹಾಜರಾಗಿದ್ದು, ಗುರುತಿಸುವ ವಿಚಾರದಲ್ಲಿ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿದ್ದಾರೆ.

ಪಾಟೀ ಸವಾಲು ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು